File No. KPTCL/GMT/PROJ(B19)/92/2023-DGM PROJECTS

ದೂರವಾಣಿ ಸಂ: 080–22243926
ಫ್ಯಾಕ್ಸ್ ಸಂ: 080–22110134

ವೆಬ್‌ಸೈಟ್: https://kptcl.karnataka.gov.in/
ಇ–ಅಂಚೆ: gmtkptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009.

**ಸಂಖ್ಯೆ: ಕವಿಪ್ರನಿನಿ/ಬಿ19/345/85–86** **ದಿನಾಂಕ: 30.09.2023**

## ಸುತ್ತೋಲೆ

**ವಿಷಯ:** ವಿದ್ಯುತ್ ಸಂಸ್ಥೆ ಮತ್ತು ಕಂಪನಿಗಳಿಗೆ ಸಂಬಂಧಿಸಿದಂತೆ ತಡೆಹಿಡಿಯಲಾಗಿದ್ದ ಹಿಂದಿನ ಕಾಮಗಾರಿಗಳನ್ನು ಮುಂದುವರೆಸುವ ಹಾಗೂ ಹೊಸ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು.

**ಉಲ್ಲೇಖ:**
1. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಅಇ 1 ಟಿಎಫ್‌ಪಿ 2023 ದಿನಾಂಕ: 22.05.2023.
2. ನಿಗಮ ಕಚೇರಿ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ19/345/85–86 ದಿನಾಂಕ: 22.05.2023.
3. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಅಇ 1 ಟಿಎಫ್‌ಪಿ 2023 ದಿನಾಂಕ: 28.06.2023.
4. ನಿಗಮ ಕಚೇರಿ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ19/345/85–86 ದಿನಾಂಕ: 27.07.2023.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರ ಪತ್ರ ಸಂಖ್ಯೆ: ಎನರ್ಜಿ/259/ಪಿಎಸ್‌ಆರ್/2023 ದಿನಾಂಕ: 31.07.2023.
6. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಅಇ 1 ಟಿಎಫ್‌ಪಿ 2023 ದಿನಾಂಕ: 31.07.2023.
7. ಮಾನ್ಯ ಇಂಧನ ಸಚಿವರು, ಕರ್ನಾಟಕ ಸರ್ಕಾರ ರವರ ಅನುಮೋದನೆ ದಿನಾಂಕ: 15.09.2023ರನ್ವಯ ಇಂಧನ ಇಲಾಖೆಯಿಂದ ಸ್ವೀಕೃತವಾದ ನಿರ್ದೇಶನ ದಿನಾಂಕ: 19.09.2023 (ಇ–ಕಚೇರಿ ಕಡತ ಸಂಖ್ಯೆ: E-66869).
8. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿತ ಟಿಪ್ಪಣಿ ದಿನಾಂಕ: 29.09.2023 (ಇ–ಕಚೇರಿ ಕಡತ ಸಂಖ್ಯೆ: E-72700).

EE-II 03/x/23

*********

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ದಿನಾಂಕ 22.05.2023ರ ಸುತ್ತೋಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ನಿರ್ದೇಶನದಂತೆ ಹಿಂದಿನ ಸರ್ಕಾರ ಕೈಗೊಂಡಿದ್ದ ಎಲ್ಲಾ ಇಲಾಖೆಗಳ ಹಾಗೂ ಇಲಾಖೆಗಳ ಅಧೀನಕ್ಕೊಳಪಡುವ ನಿಗಮಗಳ / ಮಂಡಳಿ / ಪ್ರಾಧಿಕಾರಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಮುಂದಿನ ಹಣ ಬಿಡುಗಡೆ / ಪಾವತಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ತಡೆಹಿಡಿಯಲು ಹಾಗೂ ಪ್ರಾರಂಭವಾಗದಿರುವ ಎಲ್ಲಾ ಕಾಮಗಾರಿಗಳನ್ನು ತಡೆಹಿಡಿಯಲು ಸೂಚಿಸಿದ್ದರಿಂದ, ಸದರಿ ಸುತ್ತೋಲೆಯಲ್ಲಿನ ಸೂಚನೆಯನ್ನು ಕಡ್ಡಾಯವಾಗಿ ಅನುಸರಿಸುವಂತೆ ಉಲ್ಲೇಖ (2)ರಲ್ಲಿನ ನಿಗಮದ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು.

ಮುಂದುವರೆದು, ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ದಿನಾಂಕ 28.06.2023ರ ಸುತ್ತೋಲೆಯಲ್ಲಿನ ಕ್ರಸಂ (2) ಮತ್ತು (3)ರ ನಿರ್ದೇಶನದನ್ವಯ ಪಾವತಿ / ಹಣ ಬಿಡುಗಡೆಗೆ ಸಂಬಂಧಿಸಿದಂತೆ, ಉಲ್ಲೇಖ (4)ರ ನಿಗಮದ ಸುತ್ತೋಲೆಯಲ್ಲಿ ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಗಿರುತ್ತದೆ.

ಪ್ರಸ್ತುತ, ಇಂಧನ ಇಲಾಖೆಯ ಉಲ್ಲೇಖ ಪತ್ರ (5)ರಲ್ಲಿ, ಇಂಧನ ಇಲಾಖೆಯಲ್ಲಿನ ಸಂಸ್ಥೆಗಳು ಹಾಗೂ ಕಂಪನಿಗಳು, ತಮ್ಮ ಕಂಪನಿಗಳ ಸ್ವಂತ ಆರ್ಥಿಕ ಸಂಪನ್ಮೂಲದಿಂದ ನಿರ್ವಹಿಸುತ್ತಿರುವ ಬಂಡವಾಳ ಕಾಮಗಾರಿಗಳನ್ನು ಮುಂದುವರೆಸಿಕೊಂಡು ಹೋಗಲು ಹಾಗೂ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಇರುವ ನಿರ್ಬಂಧನೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸಡಿಲಗೊಳಿಸಿ, ಆರ್ಥಿಕ ಇಲಾಖೆಯ ಸುತ್ತೋಲೆಯಲ್ಲಿನ ನಿರ್ದೇಶನಗಳನ್ನು ಪಾಲಿಸುವುದರಿಂದ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಲಾಗಿರುತ್ತದೆ.

ಆದರೆ, ಆರ್ಥಿಕ ಇಲಾಖೆ ಸುತ್ತೋಲೆ ಸಂಖ್ಯೆ ಅಇ 1 ಟಿಎಫ್‌ಪಿ 2023 ದಿನಾಂಕ: 31.07.2023 ರ ಕ್ರ.ಸಂ. (3) ರಲ್ಲಿ, "*ಹಿಂದಿನ ಸರ್ಕಾರದಿಂದ ಅನುಮೋದನೆಗೊಂಡು ಇನ್ನೂ ಪ್ರಾರಂಭವಾಗದಿರುವ (unstarted) ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಸಚಿವರ ಅನುಮೋದನೆಯೊಂದಿಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಆಡಳಿತ ಇಲಾಖೆಯ ಕಾರ್ಯದರ್ಶಿಗಳು ಕ್ರಮ ವಹಿಸಲು ತಿಳಿಸಿದೆ*" ಎಂದು ಸೂಚಿಸಲಾಗಿರುತ್ತದೆ.

ಪೂರ್ವೋಕ್ತ ಸುತ್ತೋಲೆಗಳಲ್ಲಿನ ನಿರ್ದೇಶನದ ಹಿನ್ನೆಲೆಯಲ್ಲಿ, ಕಾಮಗಾರಿಗಳನ್ನು ಮುಂದುವರೆಸುವುದರ ಕುರಿತಾಗಿ ಹಾಗೂ ಹೊಸ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಮಾನ್ಯ ಇಂಧನ ಸಚಿವರು, ಉಲ್ಲೇಖ (7)ರನ್ವಯ ಅನುಮೋದನೆ ನೀಡಿದ್ದು, ಈ ಕುರಿತಾಗಿ ಅಗತ್ಯ ಕ್ರಮ ವಹಿಸಲು ಸೂಚಿಸಿ ಇಂಧನ ಇಲಾಖೆಯಿಂದ ನಿರ್ದೇಶನ ನೀಡಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ನಿಗಮದಿಂದ ಅನುಮೋದನೆಗೊಂಡು ಕೈಗೊಳ್ಳಲಾಗುತ್ತಿರುವ ಎಲ್ಲಾ ಕಾಮಗಾರಿಗಳನ್ನು ಮತ್ತು ಅವಶ್ಯಕವಿರುವ ಅನುಮೋದನೆ ಪ್ರಕ್ರಿಯೆಗಳನ್ನು ನಿಗಮದ ನಿಯಮಾನುಸಾರ ಮುಂದುವರೆಸಲು ಹಾಗೂ ಅಗತ್ಯಕ್ಕೆ ತಕ್ಕಂತೆ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು / ಸೇವೆಗಳನ್ನು ಪಡೆಯಲು ಇರುವ ನಿರ್ಬಂಧನೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸಡಿಲಗೊಳಿಸಿ, ಅಗತ್ಯಕ್ಕೆ ತಕ್ಕಂತೆ ಕಾಮಗಾರಿಗಳಿಗೆ / ಸೇವೆಗಳಿಗೆ ಟೆಂಡರ್ ಪ್ರಕ್ರಿಯೆಯನ್ನು ನಿಯಮಾನುಸಾರ ಕ್ರಮವಹಿಸಿ ಕೈಗೊಳ್ಳಲು ಈ ಮೂಲಕ ಸೂಚಿಸಿದೆ.

BR 30/9/23

**ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)**
**ಕವಿಪ್ರನಿನಿ**

**ಇವರಿಗೆ:**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ, ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ.
4. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ) / ಸಿವಿಲ್, ಕವಿಪ್ರನಿನಿ.
6. ಎಲ್ಲಾ ಉಪ–ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
7. ಕಂಪನಿ ಕಾರ್ಯದಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
8. ಲೆಕ್ಕಾಧಿಕಾರಿ (ಕೋಡಿಫಿಕೇಶನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಹಣಕಾಸು) / ನಿರ್ದೇಶಕರು (ಪ್ರಸರಣ) / ನಿರ್ದೇಶಕರು (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ನಿರ್ದೇಶಕರುಗಳ ಮುಂದೆ ಮಂಡಿಸಲು.

**ಪ್ರತಿಯನ್ನು:**

ಅಧೀಕ್ಷಕ ಇಂಜಿನಿಯರು (ವಿ), (ಐಟಿ), ಕವಿಪ್ರನಿನಿ ರವರಿಗೆ ಕವಿಪ್ರನಿನಿ ಜಾಲತಾಣದಲ್ಲಿ ಸುತ್ತೋಲೆಯನ್ನು ಪ್ರಕಟಿಸಲು ವ್ಯವಸ್ಥೆ ಮಾಡಲು.